ಇ) ಹಾಗಿದ್ದಲ್ಲಿ ಕೆಲಸ ಪ್ರಾರಂಭಿಸದೇ ಇರಲುಕಾರಣವೇನು ?

ಈ) ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಉಮೇಶ್. ವಿ. ಕತ್ತಿ (ಲೋಕೋಪಯೋಗಿ ಸಚಿವರು) :

ಅ) ಹೌದು.

ಆ) ಇಲ್ಲ.

ಇ) ಆರೋಗ್ಯ ಇಲಾಖೆಯಿಂದ ಲೋಕೋಪಯೋಗಿ ಇಲಾಖೆಗೆ ನಿವೇಶವನ್ನು ನೀಡಿರುವುದಿಲ್ಲ. ಕಾಮಗಾರಿಯ ಅಂದಾಜಿಗೆ ಅಗತ್ಯವಿರುವ ಅನುದಾನವನ್ನು ಈ ಸಾಲಿನ ಆಯ ವ್ಯಯದಲ್ಲಿ ಒದಗಿಸಿರುವುದಿಲ್ಲ. ಆದ್ದರಿಂದ ಕೆಲಸವನ್ನು ಪ್ರಾರಂಭಿಸಿರುವುದಿಲ್ಲ.

ಈ) ನಿವೇಶನ ಲಭ್ಯವಾದ ನಂತರ ಅನುದಾನ ಪಡೆದು ಇಲಾಖಾ ನಿಯಮಗಳ ಅನುಸಾರ ಕೆಲಸ ಪ್ರಾರಂಭಿಸಲಾಗುವುದು.

ಭಟ್ಕಳ ತಾಲ್ಲೂಕು ಬೈಲೂರು ತುದಳ್ಳಿ ಸೇತುವೆ

592 (85) ಶ್ರೀ ಶಿವನಂದ ನಾಯಕ್ (ಭಟ್ಕಳ) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಭಟ್ಕಳ ತಾಲ್ಲೂಕು ಆಳವೆಕುಡಿ ಹಾಗೂ ಬೈಲೂರು ತುದಳ್ಳಿಯಲ್ಲಿ ಮೀನುಗಾರಿಕೆ ಇಲಾಖೆ ವತಿಯಿಂದ ರಸ್ತೆ ಸಂಪರ್ಕಕ್ಕಾಗಿ ಸೇತುವೆ ನಿರ್ಮಿಸುವ ಬಗ್ಗೆ ಪ್ರಸ್ತಾವನೆಯನ್ನು ಸರ್ಕಾರ ಪರಿಶೀಲಿಸುತ್ತಿದೆಯೇ?

ಆ) ಹಾಗಿದ್ದಲ್ಲಿ, ಈ ಸೇತುವೆಗಳನ್ನು ನಿರ್ಮಿಸಲು ತಗಲುವ ಅಂದಾಜು ವೆಚ್ಚ ಎಷ್ಟು ?

ಇ) ಈ ಸೇತುವೆಗಳನ್ನು ಯಾವ ಯೋಜನೆ ಯಡಿ ನಿರ್ಮಿಸಲಾಗುವುದು.

ಈ) ಈ ಸೇತುವೆಗಳ ನಿರ್ಮಾಣ ಕಾರ್ಯವನ್ನು ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಅ) ಹೌದು.

ಆ) ಅಂದಾಜು ವೆಚ್ಚ ತಯಾರಿಸಲು ಲೋಕೋಪಯೋಗಿ ಇಲಾಖೆಯು ಸ್ಥಳ ಸರ್ವೇಕ್ಷಣೆ ಕೈಗೊಂಡಿರುವುದು.

ಇ) ರಾಷ್ಟ್ರೀಯ ಗ್ರಾಮೀಣಾಭಿವೃದ್ಧಿ ಮತ್ತು ಕೃಷಿ ಬ್ಯಾಂಕ್ (ನಬಾರ್ಡ್) ಯೋಜನೆಯಡಿ ಕೈಗೊಳ್ಳಲು ಪರಿಶೀಲಿಸಲಾಗುತ್ತಿದೆ.

ಈ) ಯೋಜನಾ ಮಂಜೂರಾದ ನಂತರ.